**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

**ಸಿ.ಸಿ.ನಂಃ3680/2023**

ಸಿ.ಡಬ್ಲ್ಯೂ –1 ಪಿ.ಡಬ್ಲ್ಯೂ -1

| | | |
|---|---|---|
| ಹೆಸರು | ಃ | ವಿಶ್ವನಾಥ |
| ತಂದೆಃಗಂಡ | ಃ | ಸುಭಾಷ |
| ವಯಸ್ಸು | ಃ | 24 ವರ್ಷ |
| ಉದ್ಯೋಗ | : | ವಿದ್ಯಾರ್ಥಿ |
| ವಾಸಸ್ಥಳ | ಃ | ಜೇವರ್ಗಿ |

ದಿನಾಂಕಃ 18-01-2024

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆಃ ಸ.ಸ.ಅ. ರವರಿಂದಃ**

ಆರೋಪಿ ಪರಿಚಯ ಇರುವುದಿಲ್ಲ ಆದರೆ ವಿಶ್ವವಿದ್ಯಾಲಯದಲ್ಲಿ ನೋಡಿರುತ್ತೇನೆ. ಚಾಸಾ-2 ರಿಂದ 7 ರವರ ಪರಿಚಯ ಇರುವುದಿಲ್ಲ. ನನಗೆ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ಪ್ರಕರಣವನ್ನು ಮುಂದುವರಿಸಲು ಇಚ್ಚಿಸುವುದಿಲ್ಲ. ಸಾಕ್ಷಿಗೆ ಈಗ ದೂರನ್ನು ತೋರಿಸಿ ಅದನ್ನು ಗುರುತಿಸಿರುವುದರಿಂದ ದೂರನ್ನು ನಿಪಿ-1 ಸಾಕ್ಷಿಯ ಸಹಿಯನ್ನು ನಿಪಿ-1 (ಎ) ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)**

**ಪಾಟೀ ಸವಾಲು ಃ ಸ.ಸ.ಅ. ವಕೀಲರಿಂದ.**

ದಿ.10.04.2022 ರಂದು ರಾಮನವಮಿ ಇದಿದ್ದ ನಿಮಿತ್ತ್ಯ ವಿಶ್ವವಿದ್ಯಾಲಯದ ಆವರಣದಲ್ಲಿ ಶ್ರೀ ಲಕ್ಷ್ಮಿ ದೇವಿಯ ಪೂಜೆ ಮಾಡುವ ವಿಚಾರವಾಗಿ ನಾನು, ಚಾಸಾ-4 ರಿಂದ 7 ರವರು ಕೂಡಿ ಲಕ್ಷ್ಮಿ ದೇವಸ್ಥಾನಕ್ಕೆ ಹೋಗಿ ಪೂಜೆ ಮಾಡಿ ಮರಳಿ ಬರುವಾಗ ಆರೋಪಿ ನನ್ನ ರಾಯಲ ಎನಫೀಲ್ಡ್ ಮೋಟರ ವಾಹನ ಸಂಖ್ಯೆ ಕೆಎ-32/ಇಎಸ-0127 ಮೇಲೆ ಬಂದು ನನಗೆ ವಿಶ್ವವಿದ್ಯಾಲಯದ ಆವರಣದಲ್ಲಿ ಎಕೆ ಪೂಜೆ ಮಾಡುತ್ತಿಯ ಎಂದು ತಡೆದು ನಿಲ್ಲಿಸಿ ಎದೆಯ ಮೇಲಿನ ಅಂಗಿ ಹಿಡಿದು ಕೈಯಿಂದ ಕಪಾಳಕ್ಕೆ ಹಾಗೂ ಬೆನ್ನ ಮೇಲೆ ಹೊಡೆದಿರುತ್ತಾನೆ, ಅಲ್ಲೇ ಬಿದ್ದಿದ್ದ ಚೂಪಾದ ಕಲ್ಲಿನಿಂದ ಕುತ್ತಿಗೆಯ ಹತ್ತಿರ ಹೊಡೆದು ರಕ್ತಗಾಯ ಮಾಡಿರುತ್ತಾನೆ ಎಂದರೆ ಸರಿಯಲ್ಲ. ಆಗ ಚಾಸಾ-4 ರವರು ಜಗಳ ಬಿಡಿಸಲು ಬಂದಾಗ ಆರೋಪಿ ಕೈ ಮುಷ್ಟಿ ಮಾಡಿ ಹಣೆಯ ಮೇಲೆ ತಲೆಯ ಮೇಲೆ ಬೆನ್ನ ಮೇಲೆ ಹೊಡೆದು ಗುಪ್ತಗಾಯ ಪಡಿಸಿರುತ್ತಾನೆ ಎಂದರೆ ಸರಿಯಲ್ಲ ಆಗ ಚಾಸಾ-5 ರಿಂದ 7 ರವರು ಜಗಳ ಬಿಡಿಸಿರುತ್ತಾರೆ ಎಂದರೆ ಸರಿಯಲ್ಲ. ಜಗಳ ಬಿಟ್ಟು ಹೋಗುವಾಗ ಆವರಣದಲ್ಲಿ ಮತ್ತೊಂದು ಬಾರಿ ಪೂಜೆ ಮಾಡಿದರೆ ಜೀವ ಸಹಿತ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಈ ಮುಂಚೆ ನಾನು ಹೇಳಿಕೆ ನೀಡಿದ್ದು ಈಗ ಆರೋಪಿಯೊಂದಿಗೆ ರಾಜಿಯಾಗಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪೋಲಿಸರ ಎದುರು ಪುರವಣಿ ಹೇಳಿಕೆ ನೀಡಿರುತ್ತೇನೆ ಎಂದರೆ

ಸರಿಯಲ್ಲ.

ಸದರಿ ಘಟನೆ ಬಗ್ಗೆ ನಾನು ನರೋಣಾ ಪೋಲಿಸರ ಮುಂದೆ ಈ ಕಳಗೆ ಓದಿ ಹೇಳಿದಂತೆ ದಿನಾಂಕ: 11.0.2022 ರಂದು ಈಗ ಓದಿ ಹೇಳಿದ ಹಾಗೇ **............** ಮುಂದುವರೆದ ಹೇಳಿಕೆ " ಎಂದು ಹೇಳಿಕೆ ಕೊಟ್ಟಿರುತ್ತೆನೆ ಎಂದರೆ ಸರಿ ಅಲ್ಲ, ಸಾಕ್ಷಿಯು ನಿರಾಕರಿಸಿದ ಮುಂದುವರೆದ ಹೇಳಿಕೆಯನ್ನು ನಿಪಿ-**2** ಎಂದು ಗುರುತಿಸಲಾಯಿತು. ನಿಪಿ-**2** ರಲ್ಲಿನ ಸಂಗತಿಗಳು ಗೊತ್ತಿದ್ದರೂ ಆರೋಪಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿ ಪರ ವಕೀಲರಿಂದ:**

ಪಾಟೀ ಸವಾಲು ಇರುವುದಿಲ್ಲ.

**ಮರುವಿಚಾರಣೆಃ-** ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ.